ತಾಮ್ರದ ಗಂಟೆ, ರೋಗನ್ ಕಲೆ ಮುಂತಾದ ಪಾರಂಪರಿಕ ಕಲೆಗಳಿಗೆ ಹೆಸರುವಾಸಿಯಾಗಿದೆ ಈ ಗ್ರಾಮ. ಕರಕುಶಲ ವಸ್ತುಗಳನ್ನೇ ತನ್ನ ಜೀವನಾಡಿಯಾಗಿರಿಸಿಕೊಂಡಿರುವ ಈ ಗ್ರಾಮವನ್ನು 'ಕಚ್‌ನ ರತ್ನ' ಎಂದು ಕರೆಯುತ್ತಾರೆ. ಈ ಹಳ್ಳಿಯ ಭೇಟಿ ನಮಗೆ ಬಹಳ ಖುಷಿ ನೀಡಿತು.

## ಕಚ್ ಎತ್ತರದ ಸ್ಥಳ ಕಾಲೊ ಡೂಂಗರ್

ಗಾಂಧಿ ನು ಗ್ರಾಮ್ ಭೇಟಿ ಮುಗಿದ ಮೇಲೆ ನಮ್ಮ ವಾಹನವು ಕಾಲೊ ಡೂಂಗರ್ ಕಡೆಗೆ ಹೊರಟಿತು. ಕಾಲೊ ಡೂಂಗರ್ ಅಂದರೆ ಕಪ್ಪು ಬೆಟ್ಟ ಎಂದರ್ಥ. ಸಮುದ್ರ ಮಟ್ಟದಿಂದ 462 ಮೀಟರ್ ಎತ್ತರದಲ್ಲಿರುವ ಈ ಬೆಟ್ಟವು ಕಚ್‌ನ ಅತಿ ಎತ್ತರದ ಸ್ಥಳ. ಟೆಂಟ್ ಸಿಟಿಯಿಂದ 50 ಕಿ.ಮೀ. ದೂರದಲ್ಲಿರುವ ಈ ಬೆಟ್ಟ ಪಾಕಿಸ್ತಾನದ ಗಡಿಗೆ ಸಮೀಪದಲ್ಲಿದೆ. ಬೆಟ್ಟದ ತುದಿಯಲ್ಲಿ ಒಂದು ಸೇನಾ ಪೋಸ್ಟ್ ನೆಲೆಗೊಂಡಿದೆ.

ಒಂದು ನಿರ್ದಿಷ್ಟ ಹಂತದವರೆಗೆ ಮಾತ್ರ ಜನರಿಗೆ ಪ್ರವೇಶವಿದೆ. ಈ ಬೆಟ್ಟದ ತುತ್ತತುದಿಯಿಂದ ರಣ್ ಆಫ್ ಕಚ್‌ನ 360 ಡಿಗ್ರಿ ವಿಹಂಗಮ ನೋಟವನ್ನು ವೀಕ್ಷಣೆ ಮಾಡಬಹುದು. ದಿಗಂತಕ್ಕೆ ಬಂಗಾರದ ಬಣ್ಣ ಬಳಿಯುವ ಸೂರ್ಯಾಸ್ತದ ಸೊಬಗನ್ನು ವೀಕ್ಷಿಸಲು ಇದು ಅತ್ಯಂತ ಜನಪ್ರಿಯ ತಾಣ. ಈ ವೀಕ್ಷಣೆಗಾಗಿ ಪ್ರತಿದಿನ ಸಂಜೆ ಇಲ್ಲಿ ಜನಜಾತ್ರೆಯೇ ಸೇರುತ್ತದೆ. ಬೈನಾಕುಲರ್ ಹಿಡಿದುಕೊಂಡು ಬಂದ ಹುಡುಗನೊಬ್ಬ ನಮಗೆ ಪಾಕಿಸ್ತಾನದ ಹಳ್ಳಿಯನ್ನು ತೋರಿಸುತ್ತೇನೆ ಎಂದು ಹೇಳಿ ನಮ್ಮಿಂದ ಸ್ವಲ್ಪ ಹಣ ಕಿತ್ತುಕೊಂಡ. ಆ ಹಳ್ಳಿಯೇನೂ ನಮಗೆ ಕಾಣಲಿಲ್ಲ.

ಈ ಕಪ್ಪು ಬೆಟ್ಟದ ಮೇಲೆ 400 ವರ್ಷಗಳಷ್ಟು ಹಳೆಯದಾದ ದತ್ತಾತ್ರೇಯ ದೇವಾಲಯವಿದೆ. ಸ್ಥಳೀಯ ದಂತಕಥೆಯ ಪ್ರಕಾರ ದತ್ತಾತ್ರೇಯನು ಹಸಿವಿನಿಂದ ಬಳಲುತ್ತಿದ್ದ ಕಾಡು ನರಿಗಳಿಗೆ ತನ್ನ ಸ್ವಂತ ದೇಹದ ಭಾಗವನ್ನೇ ಆಹಾರವಾಗಿ ನೀಡುತ್ತಿದ್ದನಂತೆ. ಮತ್ತು ಆ ಭಾಗವು ತನ್ನಿಂದ ತಾನೇ ಪುನರುಜ್ಜೀವನಗೊಳ್ಳುತ್ತಿತ್ತಂತೆ. ಅದರ ದ್ಯೋತಕವಾಗಿ ಇಲ್ಲಿ ಈಗಲೂ ಪ್ರತಿದಿನ ಸಂಜೆ ಆರತಿಯ ನಂತರ ಕಾಡು ನರಿಗಳಿಗೆ ಅನ್ನವನ್ನು ಪ್ರಸಾದವಾಗಿ ನೀಡುವ ಸಂಪ್ರದಾಯ ಮುಂದುವರಿದಿದೆ. ಆ ಸಮಯಕ್ಕೆ ಸರಿಯಾಗಿ ಕಾಡು ನರಿಗಳು ಇಲ್ಲಿ ಸೇರುವುದು ಕುತೂಹಲ ಮೂಡಿಸುತ್ತದೆ. ಈ ದೃಶ್ಯವನ್ನು ವೀಕ್ಷಿಸಲು ಪ್ರತಿ ದಿನ ಅನೇಕ ಪ್ರವಾಸಿಗರು ಇಲ್ಲಿ ಸೇರುತ್ತಾರೆ.

ಇಲ್ಲಿಂದ ವಾಪಸು ಹೋಗುವಾಗ ನಮಗಾಗಿ ಸೋಜಿಗವೊಂದು ಕಾದಿತ್ತು. ಬೆಟ್ಟದ ಒಂದು ವಿಶಿಷ್ಟ ಪ್ರದೇಶವು 'ಕಾಂತೀಯ ಕ್ಷೇತ್ರ'ವನ್ನು ಹೊಂದಿದೆ ಎಂದು ನಮ್ಮ ಮಾರ್ಗದರ್ಶಿ ತಿಳಿಸಿದ. ಬೆಟ್ಟದ ಈ ಭಾಗದಲ್ಲಿ ವಾಹನಗಳು ತಟಸ್ಥ ಗೇರ್‌ನಲ್ಲಿದ್ದರೂ ಗುರುತ್ವಾಕರ್ಷಣೆಯ ವಿರುದ್ಧ ತಮ್ಮಿಂದ ತಾವೇ ಮೇಲಕ್ಕೆ ಏರುತ್ತವಂತೆ. ವಾಹನವು ಇಳಿಜಾರಿನಲ್ಲಿ ಚಲಿಸುತ್ತಿದ್ದರೂ ಇಲ್ಲಿನ ಸುತ್ತಮುತ್ತಲಿನ ವಿಶಿಷ್ಟ ಭೂದೃಶ್ಯವು ಆಪ್ಟಿಕಲ್ ಭ್ರಮೆಯನ್ನುಂಟು ಮಾಡಿ ಅದು ಮೇಲೆ ಏರಿ ಹೋಗುತ್ತಿರುವಂತೆ ತೋರುತ್ತದೆ



ಧೋಲಾವಿರಾ ಅವಶೇಷಗಳ ಒಂದು ನೋಟ

ಎನ್ನುವುದು ವೈಜ್ಞಾನಿಕ ವಿವರಣೆ. ಇಲ್ಲಿಂದ ಟೆಂಟ್ ಸಿಟಿಗೆ ಮರಳಿ ರಾತ್ರಿ ಊಟದ ನಂತರ ಸಾಂಸ್ಕೃತಿಕ ಕಾರ್ಯಕ್ರಮ ವೀಕ್ಷಿಸಿದೆವು.

ಮರುದಿನ ಬೆಳಗಿನ ಉಪಾಹಾರದ ನಂತರ ನಮ್ಮ ಪಯಣವು ಪ್ರಾಚೀನ ಹರಪ್ಪನ್ ನಗರ ಧೋಲಾವಿರಾ ಕಡೆಗೆ ಸಾಗಿತು. ಮಾರ್ಗಮಧ್ಯದಲ್ಲಿರುವ ರೋಡ್ ಟು ಹೆವೆನ್‌ನ ದರ್ಶನ ಕೂಡ ಆಯಿತು.

## ರೋಡ್ ಟು ಹೆವೆನ್

ಕಚ್‌ನಲ್ಲಿರುವ 'ರೋಡ್ ಟು ಹೆವೆನ್' 30 ಕಿ.ಮೀ. ಉದ್ದದ ಅದ್ಭುತವಾದ ಒಂದು ನೇರ ರಸ್ತೆ. ರಣ್ ಆಫ್ ಕಚ್‌ನ ಬಿಳಿ ಉಪ್ಪಿನ ಫ್ಲಾಟ್‌ಗಳ ಮೂಲಕ ಹಾದುಹೋಗುವ ಈ ರಮಣೀಯ ಮಾರ್ಗವು ಖಾವ್ಡಾ ಮತ್ತು ಧೋಲಾವಿರಾದ ಪ್ರಾಚೀನ ಹರಪ್ಪನ್ ತಾಣಕ್ಕೆ ಸಂಪರ್ಕ ಕಲ್ಪಿಸುತ್ತದೆ. ಎರಡೂ ಬದಿಗಳಲ್ಲಿ ಕಣ್ಣು ಹಾಯುವಷ್ಟು ದೂರದವರೆಗೆ ವಿಸ್ತರಿಸಿರುವ ಉಪ್ಪಿನ ಫ್ಲಾಟ್‌ಗಳ ರಮ್ಯನೋಟ ಪ್ರಯಾಣಿಕರನ್ನು ಸ್ತಂಭೀಭೂತಗೊಳಿಸುತ್ತದೆ. ಈ ರಸ್ತೆಯಲ್ಲಿ ಪ್ರಯಾಣಿಸುತ್ತಿದ್ದಂತೆ ಭೂಮ್ಯಾಕಾಶಗಳು ಬೆಸೆದುಕೊಂಡು ಆಕಾಶದಲ್ಲಿ ತೇಲುತ್ತ ಸ್ವರ್ಗಕ್ಕೆ ಹೊರಟಂತಹ ಭ್ರಮೆ ಮೂಡುತ್ತದೆ. ಹೀಗಾಗಿಯೇ ಇದು ರೋಡ್ ಟು ಹೆವೆನ್. ಸೂರ್ಯೋದಯ ಮತ್ತು ಸೂರ್ಯಾಸ್ತದ ಸಮಯದಲ್ಲಂತೂ ಇದರ ರಮಣೀಯ ನೋಟ ನೂರ್ಮಡಿಗೊಂಡು ಎಂಥವರನ್ನೂ ಮುದಗೊಳಿಸುತ್ತದೆ. ಕನ್ನಡ ಚಲನಚಿತ್ರ 'ಲವ್ ಮಾಕ್ಟೇಲ್ 3'ರ ಒಂದು ಹಾಡು ಈ ರಸ್ತೆಯ ಮೇಲೆಯೇ ಚಿತ್ರೀಕರಣಗೊಂಡಿವೆ.

## ಪ್ರಾಚೀನ ಹರಪ್ಪನ್ ನಗರ

ಇಲ್ಲಿಗೆ ಸಮೀಪದಲ್ಲಿಯೇ ಸುಮಾರು 5000 ವರ್ಷಗಳಷ್ಟು ಹಳೆಯದಾದ ಹರಪ್ಪನ್ ನಗರವಾಗಿರುವ ಧೋಲಾವಿರಾ ನೆಲೆಗೊಂಡಿದೆ. ಪ್ರಸ್ತುತ ಸುಮಾರು 2000 ಜನಸಂಖ್ಯೆಯುಳ್ಳ ಈ ಗ್ರಾಮವು ಪ್ರಾಚೀನ ಸಿಂಧೂ ಕಣಿವೆ ನಾಗರಿಕತೆಯ ಪ್ರಮುಖ ಮಹಾನಗರವಾಗಿತ್ತು. ರಣ್‌ನ ಖಾದಿರ್ ಬೆಟ್ ಎಂಬ ದ್ವೀಪದಲ್ಲಿ ನೆಲೆಗೊಂಡಿರುವ ಈ ತಾಣವನ್ನು 1968ರಲ್ಲಿ ಪತ್ತೆ ಹಚ್ಚಲಾಯಿತಾದರೂ ವ್ಯವಸ್ಥಿತ ಉತ್ಖನನ ನಡೆದದ್ದು 1990ರಿಂದ. ಈ ರೀತಿ ಪತ್ತೆ ಹಚ್ಚಲಾದ ಐದು ಹರಪ್ಪ ಸಂಸ್ಕೃತಿಯ ಗಮನಾರ್ಹ ಉತ್ಖನನಗಳಲ್ಲಿ ಧೋಲಾವಿರಾ ದೊಡ್ಡದು ಮತ್ತು ಪ್ರಮುಖವಾದುದು. ಸುಮಾರು 47 ಹೆಕ್ಟೇರು ಪ್ರದೇಶದಲ್ಲಿ ಹರಡಿಕೊಂಡಿರುವ ಈ ತಾಣವು ಅತ್ಯಾಧುನಿಕ ಜಲಸಂರಕ್ಷಣಾ ವ್ಯವಸ್ಥೆ, ಸುಸಜ್ಜಿತ ಜಲಾಶಯಗಳು, ಬೃಹತ್ ಕಲ್ಲಿನ ವಾಸ್ತುಶಿಲ್ಪವನ್ನೊಳಗೊಂಡಂತೆ ಸುಧಾರಿತ ನಗರ ಯೋಜನಾ ಕೌಶಲಗಳನ್ನು ಪ್ರದರ್ಶಿಸುತ್ತದೆ. ಆ ಕಾಲದ ಅದ್ಭುತ ಪುರಾತತ್ವ ಅವಶೇಷಗಳನ್ನು ಈಗಲೂ ಕಾಯ್ದುಕೊಂಡಿರುವ ಈ ತಾಣವು 2021ರಲ್ಲಿ ಯುನೆಸ್ಕೊ ವಿಶ್ವ ಪಾರಂಪರಿಕ ತಾಣಗಳ ಪಟ್ಟಿಯಲ್ಲಿ ಸ್ಥಾನ ಗಳಿಸಿಕೊಂಡಿದೆ. ಇದು ಭಾರತದ 40ನೇ ವಿಶ್ವ ಪಾರಂಪರಿಕ ತಾಣ.

ಪ್ರಪಂಚದಾದ್ಯಂತದ ವಿದ್ವಾಂಸರು, ಪುರಾತತ್ವ ಶಾಸ್ತ್ರಜ್ಞರು ಮತ್ತು ಇತಿಹಾಸಪ್ರಿಯರನ್ನು ಆಕರ್ಷಿಸುವ ಈ ತಾಣವು ಅಂತರರಾಷ್ಟ್ರೀಯ ಮನ್ನಣೆ ಗಳಿಸಿಕೊಂಡಿದೆ.